ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**,** ಸಿಂದಗಿ**.**

ಸಿ**.**ಸಿ**.**ನಂ**.1383/2024**

ಪಿರ್ಯಾದಿಃ

ಸರಕಾರದ ಪರವಾಗಿ
ಪಿ.ಎಸ್.ಐ. ಆಲಮೇಲ ಪೊಲೀಸ ಠಾಣೆ,

ವಿರುದ್ಧ

ಆರೋಪಿತರುಃ

1) ಅಶೋಕ ತಂ. ವಿಶ್ವನಾಥ ಕಮರೆಡ್ಡಿ
ಹಾಗೂ ಇತರರು.

ದೋಷಾರೋಪಣೆ

ಶ್ರೀ. ಎ.ಎ ಮುಲ್ಲಾ, ಬಿ.ಎ.ಎಲ್.ಎಲ್.ಎಲ್.ಬಿ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ ಈ ಮೂಲಕ ನಾನು,

ಆರೋಪಿತರಾದ

1) ಅಶೋಕ ತಂ. ವಿಶ್ವನಾಥ ಕಮರೆಡ್ಡಿ,
ವಯಾಃ 45 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಚಡಚಣ, ಹಾಲಿ ವಸ್ತಿಃ ಸಿಂದಗಿ,
ತಾಃ ಆಲಮೇಲ, ಜಿಃ ವಿಜಯಪೂರ.

2) ಮಾಂತೇಶ ತಂ. ಶಿವಪ್ಪ ಬಮ್ಮಣ್ಣಿ,
ವಯಾಃ 47 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ರಾಂಪೂರ ಪಿ.ಎ., ತಾಃ ಸಿಂದಗಿ.

3) ಶರಣಬಸು ತಂ. ಮಲಕಣ್ಣಾ ನರಬಳ್ಳಿ,
ವಯಾಃ 30 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ರಾಂಪೂರ ಪಿ.ಎ., ತಾಃ ಸಿಂದಗಿ.

4) ರಾಜಶೇಖರ ತಂ. ಮಲಕಣ್ಣ ನರಬಳ್ಳಿ,
ವಯಾ: 25 ವರ್ಷ, ಉದ್ಯೋಗ: ಒಕ್ಕಲುತನ,
ಸಾ: ರಾಂಪೂರ ಪಿ.ಎ., ತಾ: ಸಿಂದಗಿ.

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ.

ದೋಷಾರೋಪಣೆ

ದಿನಾಂಕ: 11-06-2023 ರಂದು ಸಂಜೆ 5-30 ಗಂಟೆ ಸುಮಾರಿಗೆ ಬಳಗಾನೂರ ಗ್ರಾಮದ ಹದ್ದಿಯಲ್ಲಿರುವ ಅಶೋಕ ತಂ.ವಿಶ್ವನಾಥ ಕಮರಡ್ಡಿ ಇವರಿಗೆ ಸೇರಿದ ರಿ.ಸ.ನಂ.105 ನೇದ್ದರ ಜಮೀನದಲ್ಲಿ, ಅಶೋಕ ಕಮರಡ್ಡಿ ಮತ್ತು ಫಿರ್ಯಾದಿದಾರರಾದ ಶೌಕತಅಲಿ ಮಾಶ್ಯಾಳಕರ ಇವರ ನಡುವೆ ಸದರಿ ಜಮೀನಿಗೆ ಸಂಬಂಧಿಸಿದಂತೆ ದಾವೆ ನಡೆದಿದ್ದು ಹೀಗಿದ್ದು ಎಲ್ಲಾ ಆರೋಪಿತರು ಸದರಿ ಜಮೀನದಲ್ಲಿ ಟ್ರ್ಯಾಕ್ಟರ ತೆಗೆದುಕೊಂಡು ಸಾಗುವಳಿ ಮಾಡಲು ಬಂದಾಗ ಫಿರ್ಯಾದಿ ಮತ್ತು ಚಾಸಾ-4 ರವರು ಇಬ್ಬರೂ ಕೂಡಿಕೊಂಡು 1 ನೇ ಆರೋಪಿಯ ಜಮೀನದಲ್ಲಿ ಹೋಗಿ ಸದರಿ ಜಮಿನಿಗೆ ಸಂಬಂಧಿಸಿದಂತೆ ಆರ್.ಎ.ನಂ.20/2023 ಮತ್ತು 21/2023 ನೇದ್ದರಲ್ಲಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಆದ್ದರಿಂದ ಸಾಗುವಳಿ ಮಾಡಬೇಡಿ ಅಂತಾ ಹೇಳಿದಾಗ 1 ನೇ ಆರೋಪಿತನು ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು. ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.504 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಓದಿ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಬಂದಿದ್ದು ಅದರಲ್ಲಿ 1 ನೇ ಆರೋಪಿತನು ಫಿರ್ಯಾದಿಯ ಬಲಗೈ ಕೈ ಹಿಡಿದು ತಿರುವಿ ಮತ್ತು ಕಾಲಿನಿಂದ ಮೊಣಕಾಲಿಗೆ ಒದ್ದು ಒಳಪೆಟ್ಟು ಪಡಿಸಿದ್ದು, ಚಾಸಾ-4 ರವರು ಬಿಡಿಸಲು ಬಂದಾಗ ಅವರಿಗೂ ಸಹ 1 ನೇ ಆರೋಪಿ ಈತನು ಕೈಯಿಂದ ಬಲಗಡೆ ಮುಂಡಿಗೆ ಹೊಡೆದು ಒಳಪೆಟ್ಟು ಪಡಿಸಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.323 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಓದಿ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಬಂದು ಜಗಳದ ಬಾಯಿ ಕೇಳಿ ಚಾಸಾ-6 ರಿಂದ ಚಾಸಾ-8 ರವರು ಜಗಳ ಬಿಡಿಸಲು ಬಂದಾಗ 2 ರಿಂದ 4 ನೇ ಆರೋಪಿತರು ನಿಮಗೂ ಸಹ

ಬಿಡುವುದಿಲ್ಲ ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಈ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.506 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಈ ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ)

(ಶ್ರೀ. ಎ.ಎ ಮುಲ್ಲಾ)
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ, ಸಿಂದಗಿ.